# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಐಟಿ.ಬಿಜ್-2016 ಕಾರ್ಯಕ್ರಮದ ಅಂಗವಾಗಿ ಗ್ರಾಮೀಣ ಐಟಿ.ಕ್ವಿಜ್ (Rural IT-Quiz 2016) ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ದಿನಾಂಕ:21.04.2016ರ ಸಂಖ್ಯೆ: ಐಟಿಡಿ 85 ಎಡಿಎಂ 2016ರ ಸರ್ಕಾರಿ ಆದೇಶ.

2. ದಿನಾಂಕ:16.06.2016ರ ಸಂಖ್ಯೆ: ಐಟಿಡಿ 141 ಎಡಿಎಂ 2016ರ ಸರ್ಕಾರಿ ಆದೇಶ.

3. ದಿನಾಂಕ:28.07.2016ರ ಸಂಖ್ಯೆ: ಡಿಐಟಿ/03/ಎಸ್.ಪಿ.2/2016-17/274ರ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ರವರ ಪತ್ರ.

-------

**ಪ್ರಸ್ತಾವನೆ:**

2016-17ನೇ ಸಾಲಿನ ಆಯವ್ಯಯದಲ್ಲಿ "ಲೆಕ್ಕ ಶೀರ್ಷಿಕೆ 3451-00-090-2-01 ಐ.ಟಿ. ಪಾಲಿಸಿ ಇತರೆ ಖರ್ಚು (059) (ಯೋ)" ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಚಟುವಟಿಕೆಗಾಗಿ ರೂ.1885.00 ಲಕ್ಷಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಒದಗಿಸಲಾಗಿದೆ.

2] 2016-17ನೇ ಸಾಲಿನ ಆಯವ್ಯಯದಲ್ಲಿ ಮೊದಲನೇ ತ್ರೈಮಾಸಿಕ ಕಂತನ್ನು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಗಳಾದ ಕೆಬಿಟ್ಸ್, ಕಿಯೋನಿಕ್ಸ್, ಐ.ಟಿ.ಸಿ.ಎಸ್.ಡಿ.ಎಸ್. ಹಾಗೂ ಐಐಐಟಿ-ಬಿ ಸಂಸ್ಥೆಗಳಿಗೆ ನೀಡಲು ರೂ.400.00 ಲಕ್ಷಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಿದೆ.

3] M/s TATA Consultancy Services ರವರ ಸಹಯೋಗದೊಂದಿಗೆ ರಾಷ್ಟ್ರೀಯ ಮಟ್ಟದ ಗ್ರಾಮೀಣ ಐಟಿ.ಕ್ವಿಜ್ (Rural IT-Quiz 2016) ಕಾರ್ಯಕ್ರಮವನ್ನು ಬೆಂಗಳೂರು ಐಟಿ ಬಿಟಿ ಇ.ಬಿಜ್-16 ಮೇಳದ ಅಂಗವಾಗಿ ಪ್ರತಿ ವರ್ಷವೂ ನಡೆಯುವಂತೆ 2016-17ನೇ ಸಾಲಿನಲ್ಲಿಯೂ ನಡೆಸಲು ತೀರ್ಮಾನಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕಾಗಿ ಕೆಳಕಂಡ ಅಂದಾಜು ವೆಚ್ಚಗಳನ್ನು ಭರಿಸಲು ರೂ.39.38 ಲಕ್ಷಗಳನ್ನು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ನಿರ್ದೇಶಕರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ವಿವರ | 2016-17ನೇ ಸಾಲಿಗೆ ಕೋರಲಾಗಿರುವ ಅನುದಾನ |
|---|---|---|
| 1 | 34 ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ | ರೂ. 23,40,800.00/- |
| 2 | ಬೆಂಗಳೂರಿನಲ್ಲಿ ಅಂತಿಮ ಹಂತದ ಕಾರ್ಯಕ್ರಮದ ಸಭಾಂಗಣ ವ್ಯವಸ್ಥೆ | ರೂ.1,81,500.00/- |
| 3 | ರಾಷ್ಟ್ರೀಯ ವಾಹಿನಿಯಲ್ಲಿ ಅಂತಿಮ ಹಂತದ ಕಾರ್ಯಕ್ರಮದ ದಾಖಲಿತ ಪ್ರಸಾರಕ್ಕೆ | ರೂ.2,66,200.00/- |
| 4 | ಪ್ರಮಾಣ ಪತ್ರ, ಪ್ರಶ್ನೆ ಪತ್ರಿಕೆಗಳು ಹಾಗೂ ಬೆಂಗಳೂರಿನಲ್ಲಿ ಅಂತಿಮ ಹಂತದ ಕಾರ್ಯಕ್ರಮದ ಉಪಹಾರಕ್ಕಾಗಿ | ರೂ.4,84,000.00/- |
| 5 | ಇತರೆ 5 ರಾಜ್ಯಗಳಲ್ಲಿ ಸಭಾಂಗಣ ಮತ್ತು ಉಪಹಾರಕ್ಕಾಗಿ | ರೂ.6,65,500.00/- |
| | ಒಟ್ಟು | **ರೂ. 39,38,000.00/-** |

Karnataka Biotechnology & Information Technology Services
RECEIVED
Date : 8/9/16
Time : @3:45P.m

3] ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 212 ಎಡಿಎಂ 2016 ಬೆಂಗಳೂರು, ದಿನಾಂಕ:08.09.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016-17ನೇ ಸಾಲಿನ ಆಯವ್ಯಯದಲ್ಲಿ "ಲೆಕ್ಕ ಶೀರ್ಷಿಕೆ 3451-00-090-2-01 ಐ.ಟಿ. ಪಾಲಿಸಿ ಇತರೆ ಖರ್ಚು (059) (ಯೋ)" ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಚಟುವಟಿಕೆಗಾಗಿ ರೂ.1885.00 ಲಕ್ಷಗಳನ್ನು ಒದಗಿಸಲಾಗಿದ್ದು, ಅದರಲ್ಲಿ ಬೆಂಗಳೂರು ಐಟಿ.ಬಿಜ್-2016 ಕಾರ್ಯಕ್ರಮದ ಅಂಗವಾಗಿ ಗ್ರಾಮೀಣ ಐಟಿ.ಕ್ವಿಜ್ (Rural IT-Quiz 2016) ಕಾರ್ಯಕ್ರಮವನ್ನು ನಡೆಸಲು ರೂ.39.38 ಲಕ್ಷಗಳ (ಮೂವತ್ತೊಂಭತ್ತು ಲಕ್ಷದ ಮೂವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ನಿರ್ದೇಶಕರಿಗೆ ಮಂಜೂರಾತಿ ನೀಡಿದೆ.

2] 2016-17 ನೇ ಸಾಲಿನಲ್ಲಿ "ಲೆಕ್ಕ ಶೀರ್ಷಿಕೆ 3451-00-090-2-01 ಐ.ಟಿ. ಪಾಲಿಸಿ ಇತರೆ ಖರ್ಚು (059) (ಯೋ)" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಈ ವೆಚ್ಚವನ್ನು ಭರಿಸತಕ್ಕದ್ದು.

3] ಪ್ರಧಾನ ವ್ಯವಸ್ಥಾಪಕರು, ಆರ್ಥಿಕ ಮತ್ತು ಆಡಳಿತ, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು, ಬೆಂಗಳೂರು ಇವರಿಂದ ಸ್ವೀಕರ್ತನ ರಸೀದಿ ಪಡೆದು, ನಿರ್ದೇಶಕರು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ಮೇಲು ರುಜು ಮಾಡಿ ಖಜಾನೆಯಿಂದ ಈ ಅನುದಾನವನ್ನು ಸೆಳೆದು (ಡ್ರಾ ಮಾಡಿ), ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು, ಬೆಂಗಳೂರು ಇವರಿಗೆ ವಿತರಿಸತಕ್ಕದ್ದು.

4] ನಿರ್ದೇಶಕರು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ಅನುದಾನದ ಬಳಕೆಯ ಬಗ್ಗೆ "ದೃಢೀಕರಣ ಉಪಯೋಗಿತಾ ಪ್ರಮಾಣ ಪತ್ರ" ವನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸಲ್ಲಿಸತಕ್ಕದ್ದು.

5] ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 02 ಟಿ.ಎಫ್.ಪಿ. 2016, ದಿನಾಂಕ:02.04.2016ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

8/9

**(ಸಿದ್ರಾಮಪ್ಪ ಹ ತಳವಾರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

<u>ಪ್ರತಿಗಳು:</u>

1. ಮಹಾಲೇಖಾಪಾಲರು, (ಆಡಿಟ್ & ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್, ಶಾಂತಿನಗರ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ (ಕೆಬಿಟ್ಸ್ ಸಂಸ್ಥೆಯ ಮುಖಾಂತರ).
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಉಪ ನಿರ್ದೇಶಕರು, ಖಜಾನೆ-2, ಕರ್ಮಷಿಯಲ್ ಟ್ಯಾಕ್ಸ್ ಆಫೀಸ್, ಗಾಂಧಿನಗರ, ಬೆಂಗಳೂರು.
6. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-2 ಮತ್ತು 10) ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.
9. ರಾಜ್ಯದ ಸಂಬಂಧಪಟ್ಟ ಎಲ್ಲಾ ಜಿಲ್ಲೆಗಳ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ (ಕೆಬಿಟ್ಸ್ ಸಂಸ್ಥೆಯ ಮುಖಾಂತರ).
10. ರಕ್ಷಾ ಕಡತ / ಬಿಡಿ ಪ್ರತಿಗಳು.

***

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 212 ಎಡಿಎಂ 2016, ದಿನಾಂಕ 08.09.2016

| ಕ್ರಮ ಸಂಖ್ಯೆ | ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳು | ಪ್ರಾದೇಶಿಕ ಮಟ್ಟಕ್ಕಾಗಿ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ [ತಂಡಗಳು] | ರಸಪ್ರಶ್ನೆ ಪೂರ್ಣ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಿರುವ ಅನುದಾನ |
|---|---|---|---|
| 1 | ಬೆಂಗಳೂರು ಉತ್ತರ | 25 ತಂಡಗಳು | 42350.00 |
| 2 | ಬಾಗಲಕೋಟೆ | 25 ತಂಡಗಳು | 60500.00 |
| 3 | ಬೆಂಗಳೂರು ಗ್ರಾಮಾಂತರ | 25 ತಂಡಗಳು | 60500.00 |
| 4 | ಬೆಂಗಳೂರು ದಕ್ಷಿಣ | 12 ತಂಡಗಳು | 42350.00 |
| 5 | ರಾಮನಗರ | 25 ತಂಡಗಳು | 60500.00 |
| 6 | ಚಿಕ್ಕೋಡಿ [ಬೆಳಗಾವಿ ಉತ್ತರ] | 12 ತಂಡಗಳು | 48400.00 |
| 7 | ಬೆಳಗಾವಿ ದಕ್ಷಿಣ | 12 ತಂಡಗಳು | 48400.00 |
| 8 | ಬಳ್ಳಾರಿ | 25 ತಂಡಗಳು | 84700.00 |
| 9 | ಬೀದರ್ | 25 ತಂಡಗಳು | 102850.00 |
| 10 | ಬಿಜಾಪುರ | 25 ತಂಡಗಳು | 66000.00 |
| 11 | ಚಾಮರಾಜನಗರ | 25 ತಂಡಗಳು | 60500.00 |
| 12 | ಚಿಕ್ಕಮಗಳೂರು | 25 ತಂಡಗಳು | 60500.00 |
| 13 | ಚಿಕ್ಕಬಳ್ಳಾಪುರ | 25 ತಂಡಗಳು | 60500.00 |
| 14 | ಚಿತ್ರದುರ್ಗ | 25 ತಂಡಗಳು | 60500.00 |
| 15 | ಕೊಡಗು | 25 ತಂಡಗಳು | 60500.00 |
| 16 | ದಕ್ಷಿಣ ಕನ್ನಡ | 25 ತಂಡಗಳು | 90750.00 |
| 17 | ಗದಗ | 25 ತಂಡಗಳು | 60500.00 |
| 18 | ಯಾದಗಿರ್ | 25 ತಂಡಗಳು | 78650.00 |
| 19 | ಹಾಸನ | 25 ತಂಡಗಳು | 60500.00 |
| 20 | ಹಾವೇರಿ | 25 ತಂಡಗಳು | 90750.00 |
| 21 | ಕೋಲಾರ | 25 ತಂಡಗಳು | 60500.00 |
| 22 | ಕೊಪ್ಪಳ | 25 ತಂಡಗಳು | 60500.00 |
| 23 | ಮಂಡ್ಯ | 25 ತಂಡಗಳು | 60500.00 |
| 24 | ರಾಯಚೂರು | 25 ತಂಡಗಳು | 84700.00 |
| 25 | ಶಿವಮೊಗ್ಗ | 25 ತಂಡಗಳು | 60500.00 |
| 26 | ಮಧುಗಿರಿ | 25 ತಂಡಗಳು | 48400.00 |
| 27 | ಉತ್ತರಕನ್ನಡ | 12 ತಂಡಗಳು | 60500.00 |
| 28 | ಶಿರಸಿ | 12 ತಂಡಗಳು | 60500.00 |
| 29 | ದಾವಣಗೆರೆ | 25 ತಂಡಗಳು | 60500.00 |
| 30 | ಉಡುಪಿ | 25 ತಂಡಗಳು | 90750.00 |
| 31 | ಗುಲ್ಬರ್ಗ | 25 ತಂಡಗಳು | 78650.00 |
| | ಒಟ್ಟು | | **2026200.00** |

| ಕ್ರಮ ಸಂಖ್ಯೆ | ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳು | ಪ್ರಾದೇಶಿಕ ಮಟ್ಟದಲ್ಲಿ ಭಾಗವಹಿಸುತ್ತಿರುವ ತಂಡಗಳು | ಪ್ರಾದೇಶಿಕ ಹಂತದ ರಸಪ್ರಶ್ನೆ ಕಾರ್ಯಕ್ರಮ ನಡೆಸಲು 3 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುವ ಹೆಚ್ಚುವರಿ ಅನುದಾನ |
|---|---|---|---|
| 1 | ಧಾರವಾಡ | 300 ತಂಡಗಳು | 108900.00 |
| 2 | ಮೈಸೂರು | 225 ತಂಡಗಳು | 102850.00 |
| 3 | ತುಮಕೂರು | 250 ತಂಡಗಳು | 102850.00 |
| | ಒಟ್ಟು | | **314600.00** |

**ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾದ ಹಣ ರೂ.2340800**

| | | |
|---|---|---|
| 1 | ಸಭಾಂಗಣ ಅಂತಿಮ ರೂರಲ್ ಐಟಿ ಕ್ವಿಜ್ | ರೂ.1,81,500.00 |
| 2 | ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾದ ಹಣ | ರೂ.23,40,800.00 |
| 3 | ದೂರದರ್ಶನ ಪ್ರಸಾರ | ರೂ.2,66,200.00 |
| 4 | ಸಭಾಂಗಣ ಮತ್ತು 5 ಇತರೆ ರಾಜ್ಯಗಳಲ್ಲಿ ರಿಫ್ರೆಶ್‌ಮೆಂಟ್ ಶುಲ್ಕ | ರೂ.6,65,500.00 |
| 5 | ಪ್ರಮಾಣ ಪತ್ರ, ಐದು ರಾಜ್ಯಗಳಲ್ಲಿ ಸಭಾಂಗಣಗಳು ಮತ್ತು ಪ್ರಶ್ನೆ ಪತ್ರಿಕೆಗಳು | ರೂ.4,84,000.00 |
| | **ಒಟ್ಟು ಮೊತ್ತ** | **ರೂ.3938000.00** |

8/19

(ಸಿದ್ರಾಮಪ್ಪ ಹ ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾತಂ, ಜೈತಂ ಮತ್ತು ವಿತಂ ಇಲಾಖೆ